ದಿನಾಂಕ **03-02-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಆರ್ ಟಿ ವಕೀಲರಿಂದಃ

4] ಶಿವಲಿಂಗ ರವರ ಮಗಳು ಶೇಖವ್ವ ರವರು ಮದುವೆ ಆಗಿತ್ತು. ಆಕೆಯ ಗಂಡನ ಹೆಸರು ಮತ್ತು ಆಕೆಯನ್ನು ಯಾವ ಊರಿಗೆ ಮದುವೆ ಮಾಡಿಕೊಂಡಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಶೇಖವ್ವ ರವರ ತನ್ನ ತಂಗಿ ಶಿವವ್ವ ರವರ ಬಳಿ ಇದ್ದರು. ಶಿವವ್ವ ರವರ ಗಂಡನ ಹೆಸರು ಬಸಪ್ಪ ಮುಗಳಿ. ಶಿವವ್ವ ಇವರನ್ನು ಮುಗಳಖೋಡ ಗ್ರಾಮಕ್ಕೆ ಮದುವೆ ಮಾಡಿಕೊಡಲಾಯಿತು. ಶಿವವ್ವ ಮರಣ ಆದ ನಂತರ ಆಕೆಯ ಮಕ್ಕಳನ್ನು ನೋಡಿ ಕೊಳ್ಳಲು ಶೇಖವ್ವ ರವನ್ನು ಇಟ್ಟು ಕೊಂಡರು. ಶೇಖವ್ವ ರವರ ಗಂಡನ ಹೆಸರು ರಾಜು ಮುಗಳಿ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಸ್ವ ಇಚ್ಛೆಯಿಂದ "ಶೇಖವ್ವ ಇವರನ್ನು ಜೋಪಾನ ಮಾಡಿದವರು ರಾಜು ಇದ್ದು ಆತ ಶಿವ್ವವನ ಮಗ ಎಂದು ನುಡಿಯುತ್ತಾರೆ." ಶೇಖವ್ವ ರಾಜು ಮುಗಳಿ ಎಂಬ ವ್ಯಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆಕೆಯ ಗಂಡನ ಹೆಸರು ನನಗೆ ಗೊತ್ತಿದ್ದರೂ ಸಹ ಸರಿಯಾದ ಹೆಸರು ನಮೂದಿಸಿದರೆ ಆಕೆ ಬಂದು ತನ್ನ ಪಾಲು ಕೇಳುತ್ತಾಳೆ ಎಂದು ಸುಳ್ಳು ಹೆಸರನ್ನು ವಾದ ಪತ್ರದಲ್ಲಿ ಬರೆಯಿಸಿದ್ದೇವೆ ಎಂದರೆ ಸರಿಯಲ್ಲ.

5]ಶಿವವ್ವ ಬಸಪ್ಪ ಮುಗಳಿ ರವರ ಮಕ್ಕಳ ಹೆಸರು ಶಂಕರ, ರಾಜು, ಪರಶುರಾಂ ಮತ್ತು ಅಶೋಕ. ಅವರ ಪೈಕಿ ಶಂಕರ ಮರಣ ಹೊಂದಿದ್ದಾರೆ. ಉಳಿದವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಆ ಕಾರಣಕ್ಕೆ ಈ ದಾವೆ ಉರ್ಜಿತ ಇರುವುದಿಲ್ಲ ಎಂದರೆ ಸಾಕ್ಷಿ ಅವರ ತಾಯಿ ಇರದೆ ಇರುವುದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ನುಡಿಯುತ್ತಾರೆ.

6] ಸುಶೀಲಾ ರವರ ಗಂಡನ ಹೆಸರು ಭರಮಾ ಗಿರಗಾಂವೆ. ಭರಮಾ ತಂದೆಯ ಹೆಸರು ಪ್ರಭು ಎಂದರೆ ನನಗೆ ಗೊತ್ತಿಲ್ಲ. ಭರಮಾ ಈತನಿಗೆ ರಾವಸಾಬ ಮತ್ತು ಅಪ್ಪಸಾಬ ಎನ್ನುವವ ಸಹೋದರರು ಇದ್ದಾರೆ ಎಂದರೆ ಸರಿ. ಸುಶೀಲಾ ರವರ ಮೈದುನ ಹೆಸರು ರಾವಸಾಬ ಎಂದರೆ ಸರಿ. ನಾನು ಉದ್ದೇಶ ಪೂರ್ವಕವಾಗಿ ಪ್ರತಿವಾದಿ ನಂ. 3 ರವರ ಹೆಸರನ್ನು ವಾದ ಪತ್ರದಲ್ಲಿ ತಪ್ಪಾಗಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ.

7] ದಾವಾ ಆಸ್ತಿಯ ಸಂಖ್ಯೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಯ ಅಳತೆ ದಕ್ಷಿಣ ಉತ್ತರ 60 ಅಡಿ ಪೂರ್ವ ಪಶ್ಚಿಮ 45 ಅಡಿ ಇರುತ್ತದೆ. ದಾವಾ ಆಸ್ತಿ ಬಸ್ತಿ ಗಲ್ಲಿಯಲ್ಲಿ ಇರುತ್ತದೆ. ಈ ಬಗ್ಗೆ ವಕೀಲರಿಗೆ ಮಾಹಿತಿ ನೀಡಿದ್ದೆ. ವಾದ ಪತ್ರದಲ್ಲಿ ದಾವಾ ಆಸ್ತಿಯ ವಿಸ್ತೀರ್ಣವನ್ನು ತಪ್ಪಾಗಿ

ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಕೇವಲ ಒಂದು ದಿಕ್ಕಿಗೆ ರಸ್ತೆ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪಾಲು ಮಾಡಬೇಕಾದರೆ ದಕ್ಷಿಣ ಉತ್ತರ ದಿಕ್ಕಿನಲ್ಲಿ ಭಾಗ ಮಾಡಬೇಕು ಎಂದರೆ ಸರಿ. ದಾವಾ ಆಸ್ತಿಯಲ್ಲಿ ನಾನು ನಮ್ಮ ಅಜ್ಜನ ಪಾಲು ಕೇಳಿದ್ದೇನೆ. ವಾದ ಪತ್ರದಲ್ಲಿ 1/60 ಪಾಲು ಕೇಳಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1/60 ಪಾಲು ಮಾಡಲು ಆಗುವುದಿಲ್ಲ ಎಂದರೆ ಸಾಕ್ಷಿಯು ತನಗೆ ಅಜ್ಜನ ಆಸ್ತಿಯಲ್ಲಿ ಪಾಲು ಬೇಕು ಎಂದು ನುಡಿಯುತ್ತಾರೆ.

8] ದಾವಾ ಆಸ್ತಿಯ ಪೂರ್ವಕ್ಕೆ ಯಾವ ಆಸ್ತಿ ಇದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಪ್ರತಿವಾದಿ ನಂ.23 ರವರ ಆಸ್ತಿ ಇರುತ್ತದೆ. ಸದರಿ ಆಸ್ತಿಯನ್ನು ಪ್ರತಿವಾದಿ ನಂ.23 ರವರ ತಂದೆ ಬಾಬು ರವರು ಖರೀದಿಸಿದ್ದರು. ದಾವಾ ಆಸ್ತಿಯನ್ನು ಬಾಬು ಮತ್ತು ಅವರ ಸಹೋದರರಾದ ಶಿವಲಿಂಗ ಮತ್ತು ಬಸಪ್ಪ ಪಾಲು ವಿಭಾಗ ಮಾಡಿಕೊಂಡಿದ್ದು, ದಾವಾ ಆಸ್ತಿಯ ಪೂರ್ವ ಭಾಗವನ್ನು ಬಾಬು ರವರಿಗೆ ನೀಡಲಾಗಿತ್ತು ಎಂದರೆ ಸರಿ. ನನ್ನ ಮದುವೆ ಕಾಲಕ್ಕೆ ಶಿವಲಿಂಗ ಜೀವಂತ ಇದ್ದರು. ನನ್ನ ವಿವಾಹ ಆಗಿ 35 ವರ್ಷ ಆಗಿರುತ್ತದೆ. ಶಿವಲಿಂಗ ಹಾಗೂ ಅವರ ಸಹೋದರರ ನಡುವೆ ಆದ ವ್ಯವಹಾರದ ಬಗ್ಗೆ ನನ್ನ ಅಜ್ಜ ನನಗೆ ಹೇಳಿರುತ್ತಾರೆ. ಹೊಲ ಆಸ್ತಿಯನ್ನು ನಮ್ಮ ಹಿರಿಯರ ಕಾಲದಲ್ಲಿಯೇ ಮೌಖಿಕವಾಗಿ ಪಾಲು ಮಾಡಿರುತ್ತಾರೆ. ಜಮೀನು ಆಸ್ತಿಗಳಲ್ಲಿ ಪೂರ್ವ ದಿಕ್ಕಿನ ಜಮೀನನ್ನು ಬಾಬು, ಮಧ್ಯ ಭಾಗದ ಜಮೀನನ್ನು ಬಸಪ್ಪ ಮತ್ತು ಪಶ್ಚಿಮ ಭಾಗದ ಜಮೀನನ್ನು ಶಿವಲಿಂಗ ಇವರಿಗೆ ನೀಡಲಾಗಿತ್ತು ಎಂದರೆ ಸರಿ. ಪಾಲು ಮಾಡಿ ಕೊಳ್ಳುವ ಸಮಯದಲ್ಲಿ ನಾನು ಇರಲಿಲ್ಲ. ಆಗ ನಾನು ಸಣ್ಣವಳು ಇದ್ದೆ. ನನ್ನ ಗಂಡ ಇದ್ದರು. ಜಮೀನು ಪಾಲು ಆಗಿರುವ ರೀತಿಯಲ್ಲಿ ದಾವಾ ಆಸ್ತಿಯಲ್ಲಿಯು ಕೂಡಾ ಪಾಲು ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.23 ದಾವಾ ಆಸ್ತಿ ಹಾಗೂ ತನ್ನ ಸ್ವಂತ ಆಸ್ತಿ ನಂಬರ 1277 ರಲ್ಲಿ ಮನೆ ಕಟ್ಟಿದ ನಂತರ ನಾವು ಸುಳ್ಳು ದಾವೆ ಸಲ್ಲಿಸಿದೇವೆ ಎಂದರೆ ಸರಿಯಲ್ಲ.

9] ನನಗೆ ಕವಲಾಪೂರೆ ರವರ ಪರಿಚಯ ಇದೆ. ದಾವಾ ಆಸ್ತಿಯ ಉತಾರದಲ್ಲಿ ಕವಲಾಪೂರೆ ರವರ ಹೆಸರು ಇದೆ ಎಂದರೆ ಸರಿ. ಬಸಪ್ಪ ರವರ ಮಕ್ಕಳು ತಮ್ಮ ಪಾಲನ್ನು ಕವಲಾಪೂರೆ ರವರಿಗೆ ಖರೀದಿಗೆ ನೀಡಿರುತ್ತಾರೆ. ನಾವು ಸದರಿ ಖರೀದಿಯನ್ನು ಪ್ರಶ್ನಿಸಿಲ್ಲ ಎಂದರೆ ಸರಿ. ನನ್ನ, ವಾದಿ ಹಾಗೂ ಶಿವಪುತ್ರ ಶಂಕರೆಪ್ಪ ಕವಲಾಪೂರೆ ರವರ ನಡುವೆ ಯಾವುದೇ ವ್ಯವಹಾರ ಆಗಿಲ್ಲ. ಶಿವಪುತ್ರ ಶಂಕರೆಪ್ಪ ಕವಲಾಪೂರೆ ರವರು ನನ್ನ ಗಂಡ ಹಾಗೂ ಅವರ ಸಹೋದರನ ಹೆಂಡತಿ ಮಕ್ಕಳ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆ ಸಂಖ್ಯೆ 9/11 ಎಂದರೆ ನನಗೆ ಹೇಳಲು ಆಗುವುದಿಲ್ಲ. ನಮ್ಮ ಹಾಗೂ ಸದರಿ ಕವಲಾಪೂರೆ ರವರ ನಡುವೆ ವ್ಯವಹಾರ ಇದ್ದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮ್ಮ ಪಾಲಿಗೆ

ಬಂದ ಆಸ್ತಿಯನ್ನು ಕವಲಾಪೂರೆ ರವರಿಗೆ ಮಾರಾಟ ಮಾಡಬೇಕೆಂದು ಕರಾರು ಆಗಿದೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.23 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಪ್ರತಿವಾದಪತ್ರದ ಕೈ ನಕ್ಷೆ ತಯಾರಿಸಿದ್ದು ದಾವಾ ಆಸ್ತಿ ಅದೆ ರೀತಿ ಇರುತ್ತದೆ ಎಂಬ ಸೂಚನೆಯನ್ನು ಸಾಕ್ಷಿ ಒಪ್ಪಿ ಕೊಂಡಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ.ಹೆ.ಕೆ.ಸರಿ ಇದೆ.

**(ಅಶೋಕ ಆರ್ ಹೆಚ್)**
ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚಿಕ್ಕೋಡಿ.